**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**
**ಸಿ.ಸಿ.ನಂ 51/2015**

ದಿನಾಂಕಃ20.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂಃ3  ಸಿ.ಡಬ್ಲ್ಯೂಃ **4**

ಸಾಕ್ಷಿಯ ಹೆಸರು : ಮೂಡ್ಲಪ್ಪ
ತಂದೆಯ ಹೆಸರು : ಮಲ್ಲಪ್ಪ
ವಯಸ್ಸು : 58 ವರ್ಷ
ಉದ್ಯೋಗ : ವ್ಯವಸಾಯ
ವಾಸ : ಚಿಕ್ಕಬಾಸೂರು

**ಮುಖ್ಯ ವಿಚಾರಣೆಃ ಮಾನ್ಯ ಸಸಅ ಅವರಿಂದಃ-**

ಆರೋಪಿಗಳ ಪರಿಚಯ ಇರುತ್ತದೆ. 1 ನೇ ಆರೋಪಿ ನಮ್ಮ ಅಣ್ಣ. 2 ನೇ ಆರೋಪಿ ನನ್ನ ಅತ್ತಿಗೆ. ಚಾಸಾ-1 ನನ್ನ ತಂದೆ ಮತ್ತು ಚಾಸಾ-2 ನನ್ನ ತಮ್ಮ. ಚಾಸಾ-3 ನನ್ನ ಹೆಂಡತಿ. ಕಡೂರಿನ ಲಕ್ಷ್ಮೀಶ ನಗರದಲ್ಲಿ ನನ್ನ ತಂದೆಗೆ ಮನೆಗಳು ಇವೆ. ನನ್ನ ತಂದೆಯ ಹೆಸರಿನಲ್ಲಿ 5 ಮನೆಗಳು ಇವೆ. ಅದರ ಅಸೆಸ್ಮೆಂಟ್ ನಂಬರ್ 26/15, 2468, 2614, 2467 ಆಗಿರುತ್ತದೆ.

1 ನೇ ಆರೋಪಿಯು ನನ್ನ ತಂದೆಯ ಹೆಸರಿನಲ್ಲಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ರೂ.1,41,000/- ಸಾಲ ಪಡೆದಿರುತ್ತಾರೆ. ಸದರಿ ಸಾಲವನ್ನು ನನ್ನ ತಂದೆ ಮಾಡಿರುವುದಿಲ್ಲ. ಆರೋಪಿತರು ನಕಲಿ ಸಹಿ ಮಾಡಿ ಸಾಲ ಪಡೆದಿರುತ್ತಾರೆ. 2 ನೇ ಆರೋಪಿಯು ಸಹ ನನ್ನ ತಂದೆಯ ಹೆಸರಿನಲ್ಲಿದ್ದ ವಿದ್ಯುತ್ ಸಂಪರ್ಕವನ್ನು ನಕಲಿ ಸಹಿಗಳನ್ನು ಮಾಡಿ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ. ಸದರಿ ವಿದ್ಯುತ್ ಸಂಪರ್ಕ ಪಡೆದಿರುವ ಸಂಖ್ಯೆ ನೆನಪಿರುವುದಿಲ್ಲ.

ನಾನು ಸಹಕಾರ ಸಂಘದಿಂದ ಸಾಲ ಮಾಡಿಲ್ಲ ಮತ್ತು ವಿದ್ಯುತ್ ಸಂಪರ್ಕದ ಬದಲಾವಣೆಗೆ ಸಮ್ಮತಿ ಸೂಚಿಸಿರುವುದಿಲ್ಲ, ಆದರೂ ಮೋಸದಿಂದ ಸಹಿಗಳನ್ನು ಮಾಡಿ ಸಂಪರ್ಕ ಪಡೆದಿದ್ದೀರ ಹಾಗೂ ಸಾಲ ಪಡೆದ್ದೀರಾ ಎಂದು ನನ್ನ ತಂದೆಯವರು ಆರೋಪಿಗಳನ್ನು ಕೇಳಿದ್ದಕ್ಕೆ 1 ನೇ ಆರೋಪಿಯು ನನ್ನ ತಂದೆಗೆ ಕೈಯಿಂದ ಹೊಡೆದು, 2 ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ನಂತರ ನನ್ನ ತಂದೆ ಕಾನೂನು ಕ್ರಮ ಕೈಗೊಂಡಿರುತ್ತಾರೆ. ಸಾಕ್ಷಿಯು ವಿದ್ಯುತ್ ಸಂಪರ್ಕದ ಮೀಟರ್ ಖಾತೆ ಬದಲಾವಣೆಯ ಅರ್ಜಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಮತ್ತು ಎಂದು, ಸಾಕ್ಷಿಯು ಎರಡು ಅಸೆಸ್ಮೆಂಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿದೆ.

ಸಾಕ್ಷಿಯು ಈಗ ದಿಃ23.10.2013 ರ ಅಮಾನತುತ ಮಹಜರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು, ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಹಿಯನ್ನು ನಾನು ಠಾಣೆಯಲ್ಲಿ ಮಾಡಿರುತ್ತೇನೆ. ನನ್ನ ತಂದೆ ಸಹಿ ಇರುವ ದಾಖಲೆಗಳನ್ನು ಠಾಣೆಗೆ ಹಾಜರುಪಡಿಸಿದಾಗ ಸದರಿ ಮಹಜರನ್ನು ಮಾಡಿರುತ್ತಾರೆ. ಆಗ ಸಹಿ ಮಾಡಿರುತ್ತೇನೆ. ಸದರಿ ಮಹಜರ್ ಗೆ ಚಾಸಾ-5 ಮತ್ತು 12

ರವರು ಸಹಿ ಮಾಡಿರುತ್ತಾರೆ. ಮಹಜರನ್ನು ಬೆಳಗ್ಗೆ 10.00 ರಿಂದ 10.45 ಗಂಟೆಯವರೆಗು ಜರುಗಿಸಲಾಯಿತು. ನನ್ನ ತಂದೆ ಸಹಿವುಳ್ಳ ದಾಖಲೆಗಳನ್ನು ಆ ದಿನ ಪೋಲೀಸರಿಗೆ ನೀಡಿದ್ದು ಸದರಿ ದಾಖಲೆಗಳನ್ನು ನಾನು ಈಗ ನೋಡಿದರೆ ಗುರುತಿಸಬಲ್ಲೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದು ದಿಃ02.07.1992ರ ವಿನಿಮಯ ಪತ್ರವಾಗಿರುತ್ತದೆ. ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ**

ವಿದ್ಯುತ್ ಮೀಟರ್ ಸಂಪರ್ಕದ ಸಂಖ್ಯೆ ಕೆ.ಎಲ್.3488, 3489,3490 ಮತ್ತು ಎ.ಹೆಚ್.792,793,794 ಮತ್ತು 795 ಆಗಿರುತ್ತದೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಬಿ.ಆರ್. ವಕೀಲರು ಕಾಲವಕಾಶವನ್ನು ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,
ಕಡೂರು.